ಈ) ವಲಸೆ ಕುಟುಂಬಗಳು ಅವರ ಮಕ್ಕಳಿಗೆ ಶಿಕ್ಷಣವನ್ನು ಕೊಡಲು ಹಿಂಜರಿಯುತ್ತಿದ್ದ ಹಿನ್ನೆಲೆಯಲ್ಲಿ ಅವರಿಗೆ ಶೈಕ್ಷಣಿಕೆ ಅರಿವು ಮತ್ತು ಸೌಲಭ್ಯಗಳನ್ನು ನೀಡಿ ಮಕ್ಕಳ ಶಿಕ್ಷಣ ಮುಂದುವರಿಸಲು ಅನುಕೂಲ ಕಲ್ಪಿಸಿ ಕೊಡಲಾಗುವುದೇ?

ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಋತುಮಾನ ಸೇತುಬಂಧ ಕೇಂದ್ರಗಳ ಜೊತೆಯಲ್ಲಿ ವಲಸೆ ಕುಟುಂಬದ ಮಕ್ಕಳನ್ನು **ಆಶಾಕಿರಣ** ಕೇಂದ್ರಗಳಿಗೂ ಸಹ ದಾಖಲಿಸಲು ಕ್ರಮ ವಹಿಸಲಾಗಿದೆ. ಜೊತೆಗೆ ವಲಸೆ ಬಂದಿರುವ ಶಾಲಾ ವಯಸ್ಸಿನ ಮಕ್ಕಳಿಗೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ.

ಸಂಖ್ಯೆ : ಇಡಿ 80 ಎಂಸಿಡಿ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

132 ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಅ) ರಾಜ್ಯದಲ್ಲಿ ವಿತರಿಸುತ್ತಿರುವ ವಿವಿಧ ರೀತಿಯ ಪಡಿತರ ಚೀಟಿಗಳ ವಿವರ ನೀಡುವುದು;

ಪ್ರತಿಯೊಂದು ವಿಧಧ ಪಡಿತರ ಚೀಟಿ ವಿತರಣೆಗೆ ಸರ್ಕಾರ ಗೊತ್ತುಪಡಿಸಿರುವ ಮಾನದಂಡವೇನು;

ರಾಜ್ಯದಲ್ಲಿ ವಿತರಿಸಿರುವ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ:–

ಅಂತ್ಯೋದಯ ಅನ್ನ ಯೋಜನೆ	–	1199700
ಅಕ್ಷಯ (ಬಿಪಿಎಲ್)	–	6633103
ಎಪಿಎಲ್	–	5317081
	ಒಟ್ಟು	1,31,49,884

ವರ್ಗವಾರು ಪಡಿತರ ಚೀಟಿಗೆ ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳು ಕೆಳಕಂಡಂತಿರುತ್ತವೆ:–

(i) <u>ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ:–</u>

ಮೂಲ ಬುಡಕಟ್ಟು (Primitive tribe) ಕುಟುಂಬಗಳು. ಬಡವರಲ್ಲಿ ಕಡುಬಡವರು, ಕುಟುಂಬಗಳಿಲ್ಲದ ಜೀವನ ನಿರ್ವಹಣೆಗೆ ನಿಶ್ಚಿತ ಆದಾಯ ಹಾಗೂ ಸಾಮಾಜಿಕ ನರೆವಿಲ್ಲದ 60 ಅಥವಾ 60 ವರ್ಷಕ್ಕಿಂತ ಮೇಲ್ಪಟ್ಟ ಏಕ ಪುರುಷ ಹಾಗೂ ಏಕ ಮಹಿಳೆ, ವಿಧವೆ, ಅನಾರೋಗ್ಯ ಪೀಡಿತ ಕುಟುಂಬಗಳು.

ವಿಧವೆ ಅಥವಾ ಅನಾರೋಗ್ಯ ಪೀಡಿತ ವ್ಯಕ್ತಿಗಳು/ಅಂಗವಿಕಲರು/60 ಹಾಗೂ 60 ಕ್ಕಿಂತ ಮೇಲ್ಪಟ್ಟ ವಯಸ್ಸಿನ ಜೀವನ ನಿರ್ವಹಣೆಗೆ ಯಾವುದೇ ನಿಶ್ಚಿತ ಆದಾಯವಿಲ್ಲದ/ ಸಾಮಾಜಿಕ ನೆರವಿಲ್ಲದ ಕುಟುಂಬಗಳವರು.

ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡು ಬಡವರು ಅಂದರೆ ಕೃಷಿ ಕಾರ್ಮಿಕರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರು.

(ii) <u>ಬಿಪಿಎಲ್ (ಅಕ್ಷಯ) ಪಡಿತರ ಚೀಟಿ:-</u>

ಗ್ರಾಮಾಂತರ ಪ್ರದೇಶದಲ್ಲಿ 12,000/- ರೂ.ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳ ವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

(1) 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.

(2) ಸ್ಥಿರ ದೂರವಾಣಿ ಹೊಂದಿರುವವರು.

(3) ಸ್ವಂತವಾಗಿ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)

(4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;

(5) ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ ನಡೆಯುತ್ತಿರುವವರು

(6) ತಿಂಗಳಿಗೆ ರೂ.1,000/-ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು

(7) ಆದಾಯ ತೆರಿಗೆ ಪಾವತಿಸುವವರು

(8) ನೊಂದಾಯಿತ ಗುತ್ತಿಗೆದಾರರು, ಎಪಿಎಂಸಿ ವಿತರಕರು/ಕಮೀಷನ್ ಏಜೆಂಟ್ಸ್/ಬೀಜ/ ರಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು.

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

<u>ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತದೆ:-</u>

(1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ

ಅಡಿಯಲ್ಲಿ ಉಚಿತವಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

(2) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.

(3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ನಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2000/- ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

<u>ಎಪಿಎಲ್ ಪಡಿತರ ಚೀಟಿ:-</u>

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/- ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ, ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ ಆದಾಯವುಳ್ಳ ಕುಟುಂಬಗಳು ಎಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.

ಆ) ಇತ್ತೀಚೆಗೆ ರಾಜ್ಯದಲ್ಲಿ ನೆಮ್ಮದಿ ಕೇಂದ್ರಗಳ ಮೂಲಕ ವಿತರಣೆ ಮಾಡಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಈ ಅರ್ಜಿಗಳಿಂದ ಬಂದಿರುವ ಆದಾಯದ ಬಗ್ಗೆ ತಾಲ್ಲೂಕುವಾರು ವಿವರ ನೀಡುವುದು;

22-02-2009 ರಂದು ಇರುವಂತೆ 32,86,804.

ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಇ) ಈ ನೆಮ್ಮದಿ ಕೇಂದ್ರಗಳಿಂದ ವಿತರಿಸುತ್ತಿರುವ ಪಡಿತರ ಚೀಟಿಗೆ ಯಾವ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ;

ಈ ಪಡಿತರ ಚೀಟಿಗೆ ಯಾವ ರೀತಿಯ ಸೌಲಭ್ಯ ನೀಡಲಾಗುವುದು ಹಾಗೂ ಯಾವ ದಿನಾಂಕದಿಂದ ಈ ಪಡಿತರ ಸೌಲಭ್ಯ ಜನತೆಗೆ ಲಭ್ಯವಾಗುವುದು ಎಂಬ ಬಗ್ಗೆ ವಿವರ ನೀಡುವುದು?

ನೆಮ್ಮದಿ ಕೇಂದ್ರಗಳಿಂದ ವಿತರಿಸುತ್ತಿರುವ ಪಡಿತರ ಚೀಟಿಗಳಿಗೆ ಮಾನದಂಡಗಳು ಕೆಳಕಂಡಂತಿರುತ್ತದೆ:

<u>ಬಿಪಿಎಲ್ (ಅಕ್ಷಯ) ಪಡಿತರ ಚೀಟಿ:-</u>

ಗ್ರಾಮಾಂತರ ಪ್ರದೇಶದಲ್ಲಿ 12,000/- ರೂ.ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳ ವರೆಗಿನ ವಾರ್ಷಿಕ

ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

(1) 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.

(2) ಸ್ಥಿರ ದೂರವಾಣಿ ಹೊಂದಿರುವವರು.

(3) ಸ್ವಂತವಾಗಿ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)

(4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;

(5) ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ ನಡೆಯುತ್ತಿರುವವರು

(6) ತಿಂಗಳಿಗೆ ರೂ.1,000/–ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು

(7) ಆದಾಯ ತೆರಿಗೆ ಪಾವತಿಸುವವರು

(8) ನೊಂದಾಯಿತ ಗುತ್ತಿಗೆದಾರರು, ಎಪಿಎಂಸಿ ವಿತರಕರು/ಕಮೀಷನ್ ಏಜೆಂಟ್ಸ್/ಬೀಜ/ ರಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು.

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

<u>ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತದೆ:–</u>

(1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

(2) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಬಿಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.

(3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ನಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಎಪಿಎಲ್ ಪಡಿತರ ಚೀಟಿ:–

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/– ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ, ಪಟ್ಟಣ ಪ್ರದೇಶದಲ್ಲಿ 17,000/– ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ ಆದಾಯವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.

ಈ ಬಿಪಿಎಲ್ ಪಡಿತರ ಚೀಟಿಗಳಿಗೆ ಪಡಿತರವನ್ನು ಹಾಗೂ ಸೀಮೆಎಣ್ಣೆಯನ್ನು ವಿತರಣೆ ಮಾಡಲಾಗುವುದು.

ನೆಮ್ಮದಿ ಕೇಂದ್ರಗಳ ಮುಖಾಂತರ ವಿತರಿಸಿರುವ ಬಿಪಿಎಲ್ ಪಡಿತರ ಚೀಟಿಗಳಿಗೆ ಮಾರ್ಚ್ 2009ನೇ ತಿಂಗಳಿನಿಂದ ಪಡಿತರ ವಿತರಿಸಲಾಗುವುದು.

ಆನಾಸ 37 ಡಿಆರ್ಎ 2009

(ಹೆಚ್.ಹಾಲಪ್ಪ)
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

ANNEXURE

Affidavit based Ration Card Program through Nemmadi Centers			
SL No	**DISTRICT NAME**	**Total No. of Application Issued**	**Revenue Generated (@ Rs. 50)**
1	Bagalkote	145,921	7,296,050
2	Bangalore Urban	138,886	6,944,050
3	Bangalore Rural	82,263	4,113,150
4	Belgaùm	263,967	13,198,350
5	Bellary	182,211	9,110,550
6	Bidar	140,202	7,010,100
7	Bijapur	191,595	9,579,750
8	Chamarajnagar	58,350	2,917,500
9	Chickmagalur	56,606	2,830,300
10	Chitradurga	76,357	3,817,850

11	Chikkaballapura	60,183	3,009,150
12	Dakshina Kannada	32,810	1,640,500
13	Davangere	135,354	6,767,700
14	Dharwad	187,662	9,383,100
15	Gadag	78,558	3,927,900
16	Gulbarga	273,130	13,656,500
17	Haveri	99,642	4,982,100
18	Hassan	84,551	4,227,550
19	Kodagu	25,191	1,259,550
20	Kolar	89,435	4,471,750
21	Koppal	107,675	5,383,750
22	Mandya	101,024	5,051,200
23	Mysore	146,544	7,327,200
24	Ramanagar	58,118	2,905,900
25	Raichur	125,579	6,278,950
26	Shimoga	85,557	4,277,850
27	Tumkur	163,961	8,198,050
28	Udupi	18,750	937,500
29	Uttara Kannada	76,722	3,836,100
	Grand Total	**3,286,804**	**164,340,200**

F.C.S 37 D.R.A 2009

ಕರ್ನಾಟಕ ವಿಧಾನ ಸಭೆ

134 ಶ್ರೀ ಬಾಲಕೃಷ್ಣ. ಹೆಚ್.ಸಿ.

ಕೃಷಿ ಸಚಿವರು

ಅ) ಸರ್ಕಾರದಿಂದ ಇತ್ತೀಚೆಗೆ ನಿಗದಿಪಡಿಸಿರುವ ಚೈನಾ ಪ್ರವಾಸಕ್ಕೆ ರಾಜ್ಯದಿಂದ ಎಷ್ಟು ಜನ ಪ್ರಗತಿಪರ ರೈತರನ್ನು ಕಳುಹಿಸಿಕೊಡಲಾಗುವುದು; ಈ ರೈತ ಪ್ರತಿನಿಧಿಗಳ ಆಯ್ಕೆಗೆ ನಿಗದಿಪಡಿಸಿರುವ ಮಾನದಂಡವೇನು;

ರಾಜ್ಯದಿಂದ ಸುಮಾರು 1000 ಪ್ರಗತಿಪರ ರೈತರನ್ನು ರೈತರ ಅಧ್ಯಯನ ಪ್ರವಾಸಕ್ಕೆ ವಿದೇಶಕ್ಕೆ ಕಳುಹಿಸಲು ಯೋಜಿಸಲಾಗಿದೆ. ಅದರಲ್ಲಿ 524 ಜನ ರೈತರನ್ನು ಚೀನಾ ದೇಶಕ್ಕೆ ಈಗಾಗಲೇ ಕಳುಹಿಸಿ ಕೊಡಲಾಗಿದೆ. ಜಮೀನು ಹೊಂದಿದ್ದ ಸ್ವಯಂ ವ್ಯವಸಾಯ ಮಾಡುತ್ತಿರುವ ರೈತರನ್ನು ಆಯ್ಕೆ ಮಾಡಲಾಗುತ್ತಿದೆ.

ಆ) ಈ ರೈತ ಪ್ರತಿನಿಧಿಗಳಿಗೆ ಪ್ರತಿಯೊಬ್ಬರಿಗೂ ತಗಲುವ ವೆಚ್ಚವೆಷ್ಟು ಹಾಗೂ ಈ ರೈತರಿಗೆ ಪ್ರವಾಸದಲ್ಲಿ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು;